ಮೂಲ ದಾವಾ ಸಂಖ್ಯೆ. 48/2016 ಪಿ ಡಬ್ಲ್ಯೂ 2

(ದಿನಾಂಕ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ನಾವು 6 ಜನ ಸಹೋದರರು ಇರುತ್ತೇವೆ. ನಿಮ್ಮ 6 ಜನ ಅಣ್ಣ ತಮ್ಮಂದಿರ ಪೈಕಿ ಯಾರಾದರೂ ಒಬ್ಬರದು ಮನೆ ನಂಬರ್, ವಿಸ್ತೀರ್ಣ, ಖಾತಾ ನಂಬರ್ ಹೇಳಲು ಬರುತ್ತದೆಯಾ ಎಂದರೆ ಇಲ್ಲ. ಹೊಸ ಆನಂದ ದೇವನಹಳ್ಳಿ ಗ್ರಾಮ ವಲಸೆ ಬಂದ ಗ್ರಾಮ ಎಂದರೆ ಸರಿ. ನಾವು ಮತ್ತು ಪ್ರತಿವಾದಿಯ ತಾಯಿ ಹೊಸ ಆನಂದ ದೇವನಹಳ್ಳಿ ಗ್ರಾಮಕ್ಕೆ ವಲಸೆ ಬಂದಿರುತ್ತೇವೆಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಹೊಸ ಆನಂದ ದೇವನಹಳ್ಳಿ ಗ್ರಾಮಕ್ಕೆ ಬಂದು ಹುಟ್ಟಿ ಬೆಳೆದಿರುತ್ತೇವೆ. ನಮಗೆ ಸಂಬಂಧಿಸಿದ ಹೊಲ ಮನೆ ಮತ್ತು ಪ್ರತಿವಾದಿಯ ತಾಯಿಗೆ ಸಂಬಂಧಿಸಿದ ಹೊಲ ಮನೆ ತುಂಗಭದ್ರಾ ಅಣೆಕಟ್ಟೆಗೆ ಮುಳುಗಿ ಹೋಗಿದೆ ಎಂದರೆ ಸಾಕ್ಷಿಯು ಹೌದು, ಮುಳುಗಿ ಹೋಗಿದೆ ಅಂತಾ ಹೇಳುತ್ತಾರೆನ್ನುತ್ತಾರೆ. ಮುಳುಗಡೆಯಾದ ಬಗ್ಗೆ ಸರ್ಕಾರದವರು ಪರಿಹಾರ ರೂಪವಾಗಿ ಹೊಸ ಆನಂದ ದೇವನಹಳ್ಳಿ ಗ್ರಾಮವನ್ನು ನಿರ್ಮಿಸಿ ಅಲ್ಲಿ ಆಸ್ತಿ ಮತ್ತು ಭೂಮಿಯನ್ನು ಕಳೆದುಕೊಂಡವರಿಗೆ ನಿವೇಶನಗಳನ್ನು ಮಂಜೂರು ಮಾಡಿ ಹಂಚಿಕೆ ಮಾಡಿರುತ್ತಾರೆಂದರೆ ಸರಿ. ಸದರಿ ನಿವೇಶನ ಹಂಚಿಕೆ ಪತ್ರಗಳನ್ನು ಕೆಲವೊಬ್ಬರ ಬಳಿ ಇದೆ ಕೆಲವೊಬ್ಬರ ಬಳಿ ಇರುವುದಿಲ್ಲವೆಂದರೆ ಸಾಕ್ಷಿಯು ಆ ರೀತಿಯ ಹಂಚಿಕೆ ಪತ್ರಗಳನ್ನು ನೀಡಿಲ್ಲ ಆದರೆ ನೀವುಗಳು ಇಲ್ಲೇ ಇಲ್ಲೇ ವಾಸವಾಗಿರಿ ಅಂತಾ ನಿವೇಶನಗಳನ್ನು ನೀಡಿದ್ದಾರೆನ್ನುತ್ತಾರೆ. ಸರ್ಕಾರದವರು ನಿವೇಶನಗಳನ್ನು ಹಂಚಿಕೆ ಮಾಡಿದಂತೆ ನಾವುಗಳು ಸದರಿ ನಿವೇಶನದಲ್ಲಿ ವಾಸವಾಗಿರುತ್ತೇವೆ ಅದೇ ರೀತಿ ಪ್ರತಿವಾದಿ ಮತ್ತು ಅವರ ತಾಯಿ ಅವರಿಗೆ ಹಂಚಿಕೆಯಾದ ನಿವೇಶನದಲ್ಲಿ ವಾಸವಾಗಿರುತ್ತಾರೆಂದರೆ ಸಾಕ್ಷಿಯು ಹೌದು ಮೊದಲು ವಾಸವಾಗಿದ್ದರು ಎನ್ನುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಯು ಎಷ್ಟು ವರ್ಷದ ಹಿಂದೆ ಬೇಸ್‌ಮೆಂಟನ್ನು ಹಾಕಿಕೊಂಡಿದ್ದಾಳೆಂದರೆ ಸಾಕ್ಷಿಯು ಅಲ್ಲಿ ಒಂದು ಚರಂಡಿ ಇತ್ತು ಚರಂಡಿಯ ಒಂದು ಭಾಗದಲ್ಲಿ ಪ್ರತಿವಾದಿ ಇದ್ದು ಇನ್ನೊಂದು ಭಾಗದಲ್ಲಿ ಉಳಿದವರು ಇರುತ್ತಾರೆನ್ನುತ್ತಾರೆ. ಆ ಚರಂಡಿ ಸುಮಾರು 8-10 ವರ್ಷದ ಹಿಂದೆ ಆಗಿರಬಹುದು. ನಿಡಿ-1 ರಲ್ಲಿರುವ ಜಾಗವನ್ನು ನಾನು ನೋಡಿರುವುದಿಲ್ಲ. ಅದರಲ್ಲಿರುವ ಮಹಿಳೆ ಪ್ರತಿವಾದಿ ಇರುತ್ತಾರೆ.

ತಂಟೆ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾಸ್ತಿಯಲ್ಲಿ ಪ್ರತಿವಾದಿಯು 3 ರೂಂಗಳ ಬೇಸ್‌ಮೆಂಟನ್ನು ಹಾಕಿಕೊಂಡಿರುತ್ತಾರೆನ್ನುವುದನ್ನು ನಾನು ನೋಡಿಲ್ಲ, ಆದರೆ ನಾನು ಪೋಟೋದಲ್ಲಿ ನೋಡಿದ್ದೇನೆ ಎನ್ನುತ್ತಾರೆ. ಅದನ್ನು ಯಾರು ಹಾಕಿದ್ದಾರೆನ್ನುವುದನ್ನು ನಾನು

ಕೇಳಿಲ್ಲ. ದಾವಾಸ್ತಿಯ ಚಕ್ಕುಬಂದಿ ಪೂಃ ದಾರಿ, ಪಃ ಒಬ್ಬರ ಆಸ್ತಿ ಇದೆ ಅವರ ಹೆಸರು ನನಗೆ ನೆನಪಿಲ್ಲ, ಉಃ ಚಿದಾನಂದಗೌಡ ಇವರ ಆಸ್ತಿ ಹಾಗೂ ದಃ ಚರಂಡಿ ಇರುತ್ತದೆ. ಸಾಕ್ಷಿ ಮುಂದುವರೆ ಪಃ ಶಿವಮ್ಮ ಇವರ ಆಸ್ತಿ ಇರುತ್ತದೆನ್ನುತ್ತಾರೆ. ಸದರಿ ಚಕ್ಕುಬಂದಿಯ ಮಧ್ಯದಲ್ಲಿರುವ ಜಾಗವನ್ನು ನಾನು ನೋಡಿದ್ದೇನೆ. ಸದರಿ ಆಸ್ತಿಯಲ್ಲಿ ಬೇಸ್‌ಮೆಂಟ್ ಇರುವುದನ್ನು ನಾನು ನೋಡಿದ್ದೇನೆ. ಸದರಿ ಬೇಸ್‌ಮೆಂಟಿನ ವಿಸ್ತೀರ್ಣ ಹೇಳಲು ಬರುವುದಿಲ್ಲ. ಅದನ್ನು ಯಾರು ಹಾಕಿದ್ದಾರೆನ್ನುವುದನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಬೇಸ್‌ಮೆಂಟನ್ನು ಮರಿಯಮ್ಮ ಇವಳು ಹಾಕಿರುತ್ತಾಳೆನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ಮತ್ತು ಅವರ ತಾಯಿ ದಾವಾಸ್ತಿಯಲ್ಲಿ ಸುಮಾರು ವರ್ಷದಿಂದ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಗೆ ದೇವದಾಸಿ ಪುನರ್ವಸತಿ ಯೋಜನೆಯಡಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳಲು ಸರ್ಕಾರದಿಂದ ಸಹಾಯಧನ ಮಂಜೂರಾಗಿದ್ದರಿಂದ ಅವಳು ದಾವಾಸ್ತಿಯಲ್ಲಿ ಬೇಸ್‌ಮೆಂಟನ್ನು ಮಾಡಿಕೊಂಡಿರುತ್ತಾಳೆಂದರೆ ಸರಿಯಲ್ಲ. ವಾದಿ ಮತ್ತು ನಮ್ಮ ನಡುವೆ ಒಳ್ಳೆಯ ವಿಶ್ವಾಸ ಇದೆ ಎಂದರೆ ಸರಿ. ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳುವ ಕುರಿತು ಪರವಾನಿಗೆ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿರುವ ವಿಚಾರ ನನಗೆ ಗೊತ್ತಿದೆ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ ವಾದಿಗೆ ಸಹಾಯ ಮಾಡಲು ಮತ್ತು ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ